ಏಕೆಂದರೆ ಅಸ್ಪೃಶ್ಯತೆಯು ಉಳ್ಳವರು ಮತ್ತು ಏನೂ ಇಲ್ಲದವರ ನಡುವಿನ ಅಸಮಾನತೆಯ ಪರಾಕಾಷ್ಠೆಯಾಗಿದೆ. ಗಮನಿಸಬೇಕಾದ ಅಂಶವೆಂದರೆ ಪದ್ಯ ಶುರುವಾಗುವುದು 'ದಯೆಗೊಳ್ಳಯ್ಯಾ' ಎಂದು ಕೇಳುವುದರ ಮೂಲಕ. ಮೊದಲ ಓದಿನಲ್ಲಿ ತನ್ನ ಸ್ಥಿತಿಯನ್ನು ಒಪ್ಪಿಕೊಂಡವನು ಉಳ್ಳವನನ್ನು ಪ್ರಾರ್ಥಿಸುತ್ತಿದ್ದಾನೆ ಎನ್ನಿಸಬಹುದು. ಇಡೀ ಪದ್ಯವನ್ನು ಓದಿದಾಗ ಪದ್ಯದ ಚಲನೆ ಇರುವುದೇ ಕೇಳುವುದರಿಂದ ಹಕ್ಕಿನ ಪ್ರತಿಪಾದನೆಯ ಕಡೆಗೆ.

**'ಬೇಡಿದಾಗಲೆ ಬಿಟ್ಟುಕೊಡುವುದೇ ಮೇಲು!**
**ಬೇಡ ನಾಂ ಸೆಳೆದು ಕೊಂಬೆವು ನಮ್ಮ ಪಾಲು'**

ಇದು ಸಾಂಸ್ಕೃತಿಕ ಒತ್ತಾಯವೂ ಆಗಿದೆ. ಒಂದು ಎಚ್ಚರಿಕೆಯೂ ಆಗಿದೆ. 'ನಂದಿಸು ಕಿಡಿಯಲ್ಲೇ ಹೊಲೆಯನ ಹಗೆಯಾ!' ಎನ್ನುವ ಅಪರೂಪದ ಸಾಲು ಈ ಮಾತನ್ನು ಸಮರ್ಥಿಸುತ್ತದೆ.

'ಹೊಲೆಯನ ಹಗೆ' ನಿಷ್ಕಾರಣವಲ್ಲ. ಅವನಿಗೆ ಅರಿವು ಮೂಡಿದಾಗ ತನ್ನನ್ನು ಪ್ರಾಣಿಗಳಿಗಿಂತ ಕಡೆಯಾಗಿ ಇಟ್ಟಿರುವ ವ್ಯವಸ್ಥೆಯ ಬಗ್ಗೆ ಹಗೆ ಹುಟ್ಟುವುದು ಸಹಜ ಮಾತ್ರವಲ್ಲ, ಅದು ಅತ್ಯಂತ ನೈತಿಕವಾದ ಪ್ರತಿಭಟನೆಯ ಗುರುತು ಕೂಡ. ಇಪ್ಪತ್ತನೆಯ ಶತಮಾನದ ಜಾಗತಿಕ ಸಾಹಿತ್ಯದಲ್ಲಿ ದಮನಿತರ ಹಗೆಯ ಬಗ್ಗೆ ಅರ್ಥಪೂರ್ಣವಾದ ವ್ಯಾಖ್ಯಾನಗಳು ಬಂದಿವೆ. ಇಲ್ಲಿ ಹಗೆಯೆಂದರೆ ದ್ವೇಷವಲ್ಲ. ನಾನು ಅದನ್ನು ಅರ್ಥ ಮಾಡಿಕೊಳ್ಳುವುದು ಇತಿಹಾಸದ ಚಕ್ರವನ್ನು ಚಲಿಸಬಲ್ಲ ಪ್ರತಿಭಟನೆಯಾಗಿ. ಈ ಪದ್ಯದಲ್ಲಿ ಅದು ಬೆಂಕಿಯಾಗಿ ಸ್ಫೋಟಿಸಬಲ್ಲ ಕಿಡಿಯಾಗಿದೆ. ಉಳ್ಳಯ್ಯನಿಗೆ ಸಾಧ್ಯವಿದ್ದರೆ ಈಗಲೇ ಅದನ್ನು ನಂದಿಸಬೇಕು. ಹೀಗಾಗಿ ಈ ಪದ್ಯದಲ್ಲಿಯ ವ್ಯಕ್ತಿತ್ವ 'ಚೋಮನ ದುಡಿ'ಯ ಚೋಮನಲ್ಲ. ಒಡೆಯನಿಗೆ ಎಚ್ಚರಿಕೆ ನೀಡುವ ವ್ಯಕ್ತಿಯಾಗಿದ್ದಾನೆ. ಇದು ತುಂಬಾ radical ಆಗಿದೆ, ಅಥವಾ ಜಾತಿ-ವರ್ಗ ವ್ಯವಸ್ಥೆಯನ್ನು ಬದಲಾಯಿಸಬಲ್ಲದು ಎಂದಲ್ಲ. ಆದರೆ ಈ ಬಗೆಯ ನಿಲುವಿನ ಪ್ರತಿಪಾದನೆಯೇ ಪ್ರತಿಭಟನೆಯ ಕ್ರಿಯೆಯ ಶುರುವಾತು ಆಗಿದೆ.

ಪದ್ಯದ ಶುರುವಾತಿಗೆ ಹೊಲೆಯನನ್ನು ಉಳ್ಳಯ್ಯ ಕರೆಯುವ ಬಗೆಗಳ ಪಟ್ಟಿ ಅದ್ಭುತವಾಗಿದೆ. ಈ ಕರೆಯುವಿಕೆಯೇ ಕ್ರೂರವಾದುದು. ಹೊಲೆಯನನ್ನು ಹೀನಾಯಗೊಳಿಸಿ, ಕುಗ್ಗಿಸುವಂಥದು. ಅಲ್ಲದೆ ದೂರ ನಿಂತು ಹೀಗೆ ಕರೆಯುವುದಕ್ಕೆ ವ್ಯಾಖ್ಯಾನವು ಬೇಕಿಲ್ಲ. ಭಾರತೀಯ ಸಮಾಜದಲ್ಲಿ ಕರೆಯುವುದು ಸಾಮಾಜಿಕ ನಾಮಕರಣದ ಕ್ರಿಯೆ ಆಗಿದೆ. ಈ ಸಾಮಾನ್ಯ ಕ್ರಿಯೆಯ ಹಿಂದೆ ಸಾವಿರಾರು ವರ್ಷಗಳ ಹೇಯವಾದ ಚರಿತ್ರೆಯೇ ಇದೆ. ಇಲ್ಲಿಯೇ ಒಂದು ಪ್ರಶ್ನೆಯನ್ನು ಎತ್ತಿಕೊಳ್ಳಬೇಕಿದೆ. ಈ ಪದ್ಯದಲ್ಲಿ ಬಳಕೆಯಾಗಿರುವ 'ಹೊಲೆಯ' ಪದದ ಕುರಿತು. ಇದು ಈಗ ಅಸಂವಿಧಾನಾತ್ಮಕ ಪದವಾಗಿದೆ. ಅಲ್ಲದೆ ಕವಿಯು ಎಗ್ಗಿಲ್ಲದೇ ಆ ಪದವನ್ನು ಬಳಸುತ್ತಿರುವುದು

ಪಂಜೆ ಮಂಗೇಶರಾಯರು
(ಫೆ. 22, 1874 – ಅ. 24, 1937) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದವರು. ಆಧುನಿಕ ಕನ್ನಡ ಸಾಹಿತ್ಯದ ಪಥ ನಿರ್ಮಾಪಕರಲ್ಲೊಬ್ಬರು. ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಪಂಜೆಯವರ 'ಹುತ್ತರಿ ಹಾಡು' ಕೊಡಗಿನ ನಾಡಗೀತೆಯೆಂದೇ ಪ್ರಸಿದ್ಧ. ರಾಯಚೂರಿನಲ್ಲಿ ನಡೆದ 20ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕಥೆ, ಕವಿತೆ, ಕಾದಂಬರಿ ಸೇರಿದಂತೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿರುವ ಪಂಜೆಯವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ದೊಡ್ಡದು. 'ತೆಂಕಣ ಗಾಳಿಯಾಟ' ಹಾಗೂ 'ನಾಗರಹಾವೆ ಹಾವೊಳು ಹೂವೆ' ತಲೆಮಾರುಗಳನ್ನು ದಾಟಿ ಜನರ ಮನಸ್ಸಿನಲ್ಲಿ ಉಳಿದಿರುವ ಕವಿತೆಗಳು. 'ನನ್ನ ಚಿಕ್ಕತಾಯಿ' ಕಥೆ ಕನ್ನಡ ಕಥಾಸಾಹಿತ್ಯದ ಆರಂಭಿಕ ಕಥೆಗಳಲ್ಲೊಂದು. 'ಪಂಚಕಜ್ಜಾಯ' (ಸಂಶೋಧನಾ ಲೇಖನಗಳು), 'ಐತಿಹಾಸಿಕ ಕಥಾವಳಿ' (ಕಥೆಗಳು), 'ಕೋಟಿ ಚನ್ನಯ' ಹಾಗೂ 'ಚಂಡಿಕಾ ರಹಸ್ಯ ಸಮಾಜ' ಅವರ ಕೆಲವು ಜನಪ್ರಿಯ ಕೃತಿಗಳು. 'ಹೊಲೆಯನ ಹಾಡು' ಪಂಜೆಯವರ ಕಾವ್ಯಶಕ್ತಿಗೆ ಹಾಗೂ ಸಾಮಾಜಿಕ ಕಾಳಜಿ ನಿದರ್ಶನದಂತಿರುವ ಕವಿತೆ.